ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ
ಚನ್ನರಾಯಪಟ್ಟಣ

**ಸಿ.ಸಿಃ 859/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಪ್ರಕಾಶ | ಚಾಸಾ-1 |
| ತಂದೆಯ ಹೆಸರು | ಃ | ಮಂಜೇಗೌಡ ಹೆಚ್.ಆರ್ | ಅ.ಸಾ-2 |
| ವಯಸ್ಸು | ಃ | 25 ವರ್ಷ | |
| ಉದ್ಯೋಗ | ಃ | ವಿದ್ಯಾರ್ಥಿ | ಪ್ರಮಾಣ ವಚನ ಬೋಧಿಸಲಾಯಿತು |
| ವಾಸ | ಃ | ಬಿ.ಹೊನ್ನೇನಹಳ್ಳಿ ಗ್ರಾಮ. | ದಿನಾಂಕಃ 21-07-2018 |

---

**ಮುಖ್ಯ ವಿಚಾರಣೆ ಃ- ನುರಿತ ಎ.ಪಿ.ಪಿ. ಯವರಿಂದ**

ಚಾಸಾ-2 ರಿಂದ 5 ಗೊತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ಗೊತ್ತು. ದಿನಾಂಕಃ13.05.2014 ರಂದು ನಾನು ಮತ್ತು ಚಾಸಾ-2 ರವರು ನಮ್ಮ ಜಮಿನೀನಿಗೆ ಬೈಕಿನಲ್ಲಿ ಹೋಗಿದ್ದು ವಾಪಸ್ಸು ಬರುತ್ತಿದ್ದಾಗ ಆ ಸಮಯಕ್ಕೆ 1 ನೇ ಆರೋಪಿ ತಮ್ಮ ಜಮೀನಿಂದ ನಾವು ಬರುತ್ತಿದ್ದ ದಾರಿಗೆ ಅಡ್ಡಲಾಗಿ ಬಂದು ನಮ್ಮ ದಾರಿಯಲಿದ್ಕೆ ಬರುತ್ತಿದ್ದೀರಾ ಎಂದು ಜಗಳ ತೆಗೆದು ಲೋಫರ್ ನನ್ನ ಮಕ್ಕಳು ಎಂದು ಚಾಸಾ-2 ರವರಿಗೆ 1 ನೇ ಆರೋಪಿ ಕಪಾಳಕ್ಕೆ ಹೊಡೆದು ನನಗೆ 1 ನೇ ಆರೋಪಿ ನ್ಯಾಯಾಲಯದ ಮುಂದೆ ಇರುವ ದೊಣ್ಣೆಯಿಂದ ಮೈಕೈಗೆ ಮತ್ತು ಬೆನ್ನಿಗೆ ಹೊಡೆದು ಗಾಯಪಡಿಸಿರುತ್ತಾರೆ. ಆಗ ಪಕದ ಜಮೀನಲ್ಲಿ ಕೆಲಸ ಮಾಡುತ್ತಿದ್ದ ಚಾಸಾ-3 ಮತ್ತು 4 ರವರು ಜಗಳ ಬಿಡಿಸಿರುತ್ತಾರೆ. ನಂತರ ಈ ದಿನ ನಿಮಗೆ ಅದೃಷ್ಟ ಚನ್ನಾಗಿದೆ ತಪ್ಪಿಸಿಕೊಂಡಿದ್ದಿರಾ ಒಂದಲ್ಲಾ ಒಂದು ದಿನ ನಿಮ್ಮನ್ನು ಮಾಡದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ನಂತರ ಸದರಿ ವಿಷಯವನ್ನು ಚಾಸಾ-5 ರವರಿಗೆ ಯಾರೋ ಫೋನ್ ಮೂಲಕ ವಿಷಯ ತಿಳಿಸಿದ್ದು, ಅಲ್ಲಿಗೆ ಚಾಸಾ-5 ರವರು ಬಂದು ಯಾವೊದೋ ಒಂದು ಆಟೋದಲ್ಲಿ ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ಬಂದು ಕರೆದುಕೊಂಡು ಹೋಗಿರುತ್ತಾರೆ. ನಂತರ 1 ರಂದ 5 ನೇ ಆರೋಪಿಗಳು ನಮ್ಮ ವಾಸದ ಮನೆಯ ಬಳಿ ಬಂದು ನನ್ನ ತಾಯಿ ಮನೆಯ ಒಳಗಡೆ ಇದ್ದಾಗ ನಮ್ಮ ಮನೆಯ ಬಾಗಿಲನ್ನು ಹೊಡೆದು ಹಾಕಲು ಪ್ರಯತ್ನಸಿದ್ದು ವಿಫಲವಾದಾಗ ನಮ್ಮ ಮನೆಯ ಮೇಲೆ ಕಲ್ಲುಗಳನ್ನು ಹಾಕಿ ನಮ್ಮ ಜಗಿಲಿಯ ಮೇಲೆ ಕಲ್ಲುಗಳನ್ನು ಹಾಕಿ ಜಖಂಗೊಳಿಸಿರುತ್ತಾರೆ. ನಂತರ ಅದೇ ದಿನ ಪೊಲೀಸರು ಆಸ್ಪತ್ರೆಗೆ ಬಂದು ಸಂಜೆ 09.15 ಗಂಟೆ ಸಮಯದಲ್ಲಿ ನನ್ನ ಹೇಳಿಕೆಯನ್ನು

ಬರೆದುಕೊಂಡಿರುತ್ತಾರೆ. ಸಾಕ್ಷಿಯ ಸದರಿ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ-1(ಎ) ಎಂದು ಗುರುತಿಸಲಾಯಿತು. ಆ ದಿನ 1 ನೇ ಆರೋಪಿ ಹೊಡೆದ ದೊಣ್ಣೆಯನು ನೋಡಿ ಗುರುತಿಸಿದ್ದು ಅದನ್ನು ಎಂ.ಒಎ-1 ಎಂದ ಗುರುತಿಸಲಾಯಿತು. ನಂತರ ನಾನು ಪೊಲೀಸರ ಮಾರನೇ ದಿನ ನಾನು ಪೋಲಿಸ್ ಠಾಣೆಯಲ್ಲಿ ನಮ್ಮ ಮನೆಯ ಬಳಿ ಗಲಾಟೆಯ ನಡೆದ ಸಮಯ ಬಗ್ಗೆ ಮರು ಹೇಳಿಕೆಯನ್ನು ನೀಡಿರುತ್ತೇನೆ.

ಪಾಟೀ ಸವಾಲು :- ಶ್ರೀ ಎಲ್.ಪಿ.ಜಿ. ಆರೋಪಿಗಳ ಪರ ವಕೀಲರಿಂದ

1 ನೇ ಆರೋಪಿಯ ಮೇಲೆ ನಾನು ಮತ್ತು ಚಾಸಾ-2 ರವರು ಅದೇ ದಿನ ಬೆಳಿಗ್ಗೆ ಹಲ್ಲೆ ಮಾಡಿದ್ದೇವೆ ಎಂದು ಪ್ರಕರಣ ದಾಖಲಾಗಿದೆ ಎಂದರೆ ಸರಿ. ನನ್ನ ವಿರುದ್ದ ಸಿಸಿ ನಂ.853/2015 ಎಂದು ಕಲಂ 326, 323, 504, 506 ರಡಿಯಲ್ಲಿ ಪ್ರಕರಣ ದಾಖಲಾಗಿದೆ ಎಂದರೆ ಸರಿ. ನಮ್ಮ ಜಮೀನಿನ ಸರ್ವೆ ನಂಬರ್ ಗೊತ್ತಿಲ್ಲ. ಸದರಿ ಜಮೀನು ನನ್ನ ತಂದೆಯ ಹೆಸರಿನಲ್ಲಿ ಇದೆ. ನಾನು ಆ ದಿನ 2 ನೇ ಆರೋಪಿಯ ಸರ್ವೆ ನಂ.26 ರ ಜಮೀನಿನ ಮೇಲೆ ಹೋಗುತ್ತಿದ್ದೆ ಎಂದರೆ ಸರ್ವೆ ನಂಬರ್ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಜಮಿನಿಗೂ ಆರೋಪಿಗಳ ಜಮೀನಿಗೂ ಸುಮಾರು 600 ಮೀಟರ್ ಅಂತರ ಇದೆ. ಆರೋಪಿಗಳ ಜಮೀನು ನಮ್ಮ ಜಮಿನಿಂದ ಪಶ್ಚಿಮಕ್ಕೆ ದಿಕ್ಕಿಗೆ ಬರುತ್ತದೆ. ಆ ದಿನ ನಾನು ಮತ್ತು ಚಾಸಾ-2 ರವರು ಜಮೀನಿಗೆ ಹೋಗಿ ವಾಪಸ್ತು ಬರುತ್ತಿದ್ದೆವು. ಸದರಿ ಬೈಕ್ ಸಂಖ್ಯೆ ಕೆಎ-13-ಎಲ್-8670 ನನ್ನ ತಂದೆಯ ಹೆಸರಿನಲ್ಲಿ ಇದೆ. ಗಲಾಟೆಯಾದ ಸ್ಥ.,ಳದ ಪೂರ್ವಕ್ಕೆ-ನಮ್ಮದೇ ಜಮೀನು, ಪಶ್ಚಿಮಕ್ಕೆ-ಓಬಳಾಪುರ ಮತ್ತು ಬಾಗೂರಿಗೆ ಹೋಗುವ ರಸ್ತೆ, ಉತ್ತರಕ್ಕೆ-ಆರೋಪಿಗಳ ಜಮೀನು ದಕ್ಷಿಣಕ್ಕೆ-ಕೃಷ್ಣೇಗೌಡ ಬಿನ್ ಬೋರೇಗೌಡ ರವರ ಜಮೀನು.

ನಾವು ಹೋಗಿದ್ದ ದಾರಿ ಸರ್ಕಾರಿ ದಾರಿಯೋ ಅಥವಾ ಅಲ್ಲವೊ ಗೊತ್ತಿಲ್ಲ. ಬೈಕ್ ನ್ನು ಚಾಸಾ-2 ರವರು ಓಡಿಸುತ್ತಿದ್ದರು. ಗಲಾಟೆಯ ಸಮಯಕ್ಕೆ 1 ನೇ ಆರೋಪಿ ಮಾತ್ರ ಇದ್ದರು ಆಗ 1 ನೇ ಆರೋಪಿ ಸದರಿ ದಾರಿಯಲ್ಲಿ ನಡೆದುಕೊಂಡು ಬರುತ್ತಿದ್ದರು. 1 ನೇ ಆರೋಪಿ ಚಾಸಾ-2 ರವರ ಬಲ ಕಪಾಳಕ್ಕೆ ಒಂದು ಏಟು ಹೊಡೆದರು. ನನಗೆ ಮೈಕೈಗೆ ಹಾಗೂ

ಬಲಬುಜಕ್ಕೆ ಹೊಡೆದಿರುತ್ತಾರೆ. ನನಗೆ ರಕ್ತಗಾಯವಾಗಿತ್ತು. ಬಟ್ಟೆಗೆ ಹೆಚ್ಚು ರಕ್ತವಾಗಿರಲಿಲ್ಲ. ಸ್ವಲ್ಪ ರಕ್ತವಾಗಿತ್ತು. ಬೆನ್ನಿಗೆ ಎಲ್ಲಾ ಹೊಡೆದಿದ್ದು, ಒಳ ಗಾಯವಾಗಿತ್ತು.

ಚಾಸಾ-4 ರವರು ಆ ಸಮಯಕ್ಕೆ ಓಬಳಾಪುರ ಮತ್ತು ಬಾಗೂರು ರಸ್ತೆಯಲ್ಲಿ ಬರುತ್ತಿದ್ದು, ನಂತರ ಈ ದಾರಿಯಲ್ಲಿ ಬಂದು ಜಗಳ ಬಿಡಿಸಿರುತ್ತಾರೆ. ಆ ಸಮಯಕ್ಕೆ ಸುನೀಲ್ ಬೈಕಿನಲ್ಲಿ ಒಬ್ಬರೆ ಬಂದಿದ್ದರು. ಚಾಸಾ-3 ರವರು ಯಾವ ಕಡೆಯಿಂದ ಬಂದರು ಎಂದು ಗೊತ್ತಿಲ್ಲ. ಆ ಸಮಯಕ್ಕೆ ಸುಮಾರು 10 ರಿಂದ 15 ಜನರು ಸೇರಿಕೊಂಡರು. ಘಟನೆಯ ಸ್ಥಳದಿಂದ ಬಾಗೂರು 2 ಕಿ.ಮೀ ಅಂತರ ಇದೆ ಎಂದರೆ ಸರಿ. ಬಾಗೂರಿನಲ್ಲಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಇದೆ ಎಂದರೆ ನನಗೆ ಗೊತ್ತಿಲ್ಲ, ನನ್ನನ್ನು ಯಾವ ಆಟೋದಲ್ಲಿ ಕರೆದುಕೊಂಡು ಬಂದಿದ್ದರು ಎಂದು ಗೊತ್ತಿಲ್ಲ,

ಆ ದಿನ 12 ಗಂಟೆ ಸಮಯದಲ್ಲಿ 1 ನೇ ಆರೋಪಿ ನಮ್ಮ ಮನೆಯ ಬಳಿ ಬಂದು ಕಲ್ಲುಗಳನ್ನು ಎತ್ತಿ ಹಾಕಿದ್ದಾರೆ ಎಂದು ನನ್ನ ಪಿರ್ಯಾದಿನಲ್ಲಿ ಬರೆಸಿದ್ದ ಬಗ್ಗೆ ನೆನಪಿಲ್ಲ, ಮುದ್ದೆ ಮಾಲುಗಳನ್ನು ಯಾರು ಕೊಟ್ಟಿದ್ದಾರೆ ಎಂದು ಗೊತ್ತಿಲ್ಲ. ಎಂಒ-1 ರಂತಹ ದೊಣ್ಣೆ ಹಳ್ಳಿಗಳಲ್ಲಿ ಸಿಗುತ್ತವೆ ಎಂದರ ಸರಿ. ನಾನು ಅಂತಿಮ ಕಾನೂನು ಪದವಿ ವಿದ್ಯಾರ್ಥಿ ಎಂದರೆ ಸರಿ. ನಮ್ಮ ಮೇಲೆ ನೊಂದಾಯಿಸುವ ಪ್ರಕರಣವನ್ನು ಮುಚ್ಚಿ ಹಾಕುವ ಸಲುವಾಗಿ ಆರೋಪಿಗಳ ವಿರುದ್ಧ ಸುಳ್ಳು ಸಂಗತಿಯನ್ನು ಸೃಷ್ಟಿಸಿ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

*ಮರು ವಿಚಾರಣೆ ಇಲ್ಲ.*

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಒ.,**

**(ಎಸ್.ಚಿನ್ನಸ್ವಾಮಿ)**
**ಅಧಿಕ ಸಿವಿಲ್ ಜಡ್ಜ್ ಮತ್ತು**
**ಜೆ.ಎಂ.ಎಫ್.ಸಿ.,**